ಓ.ಎಸ್. ನಂ.109/2021
ಪಿ. ಡಬ್ಲ್ಯೂ-1

<u>ದಿನಾಂಕಃ **09-02-2026**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ವಿ.ವಿ.ಕೆ. ರವರಿಂದ

1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯವನ್ನು ಕೋರಿರುತ್ತಾರೆ ಆದರೆ ಅವರು ಸಕಾರಣವನ್ನು ನೀಡಿರುವುದಿಲ್ಲ ಆದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು : **2** ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್.ಬಿ. ರವರಿಂದ

2 ನೇ ಪ್ರತಿವಾದಿ ಪರ ವಕೀಲರನ್ನು ಕರೆಯಿಸಲಾಯಿತು ಅವರು ಗೈರು ಇರುತ್ತಾರೆ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು : **3** ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಎ.ಜಿ.ಪಿ. ರವರಿಂದ

2016 ರಿಂದ 2017 ರಲ್ಲಿ ಜಿಲ್ಲಾ ಆಸ್ಪತ್ರೆ ಯಾದಗಿರಿಯಲ್ಲಿ ನಾನು ಶಸ್ತ್ರ ಚಿಕಿತ್ಸಾನಾಗಿ ಕರ್ತವ್ಯನಿರ್ವಹಿಸುತ್ತಿದ್ದೇ ಎಂದರೆ ಸರಿ. ನನ್ನ ಅವಧಿಯಲ್ಲಿ ದಾವಾ ಜಮೀನನ್ನು ಸರಕಾರದವರು ವಶಪಡಿಸಿಕೊಳ್ಳಲು ಕಾರ್ಯ ಆರಂಭವಾಗಿತ್ತು ಎಂದರೆ ಸಾಕ್ಷಿಯು ಸರಕಾರದವರು ರೈತರೊಂದಿಗೆ ಮಾತುಕತೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಮುದ್ನಾಳ ಮತ್ತು ಭೀಮನಳ್ಳಿ ಗ್ರಾಮದ ಜಮೀನುಗಳಿಂದ ರಸ್ತೆಯು ವೈದ್ಯಾಕೀಯ ಕಾಲೇಜಗೆ ಹೋಗುತ್ತದೆ ಎಂದರೆ ಸರಿ. ಸದರಿ ಗ್ರಾಮದ ಜಮೀನುಗಳನ್ನು ರಸ್ತೆಯ ಸಲುವಾಗಿ ವಶಪಡಿಸಿಕೊಳ್ಳಲು ದಿನಾಂಕಃ 18.11.2016 ರಂದು ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿ ರವರು ಸಭೆ ಕರೆದಿದ್ದರು ಎಂದರೆ ಸರಿ. ಸದರಿ ಸಭೆಯಲ್ಲಿ, ನಾನು, ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು, ತಹಸೀಲ್ದಾರ, ಕಂದಾಯ ಅಧಿಕಾರಿಗಳು ಹಾಗೂ ಗ್ರಾಮ ಲೇಖಾಧಿಕಾರಿಗಳು ಹಾಜರಿದ್ದೇವು ಎಂದರೆ ಸರಿ.ಆದ್ದರಿಂದ ಸದರಿ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಕುರಿತು ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಸಂಪೂರ್ಣ ಮಾಹಿತಿ ಗೊತ್ತಿದ್ದರು ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ಸಭೆಯಲ್ಲಿ ರೈತರ 1 ಎಕರೆ ಜಮೀನಿಗೆ ರೂ.14,50,000/- ಹಣವನ್ನು ನೀಡುವ ಬಗ್ಗೆ ಮಾತುಕತೆ ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯ 8 ಎಕರೆ ಜಮೀನನ್ನು ಸರ್ಕಾರದವರು ವಶಪಡಿಸಿಕೊಂಡಿದ್ದರು ಎಂದರೆ ಸಾಕ್ಷಿಯು ಮಾನ್ಯ ಜಿಲ್ಲಾಧಿಕಾರಿಯವರು ರೈತರನ್ನು ಸಭೆಯಲ್ಲಿ ಕರೆದಿದ್ದರು, ಉಪನೊಂದಾಣಿ ಕಚೇರಿಯಲ್ಲಿ 1 ಎಕರೆ ಜಮೀನಿಗೆ ಎಷ್ಟು ಮಾರುಕಟ್ಟೆ ಮೌಲ್ಯ ಇತ್ತು ಅದಕ್ಕೆ 3 ಪಟ್ಟು ಬೆಲೆಯನ್ನು ರೈತರಿಗೆ ನೀಡುವ ಅಧಿಕಾರ ನಮ್ಮಗೆ ಇತ್ತು ಎನ್ನುವ ಬಗ್ಗೆ ಚರ್ಚೆ ಆಗಿತ್ತು ಆದರೆ ರೈತರ ಎಷ್ಟು ಜಮೀನು ಹೋಗುತ್ತದೆ ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ.

ದಿನಾಂಕಃ 24.08.2018 ರಂದು ನಾನು ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿದ್ದೆ ಎಂದರೆ ಸರಿ. ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರು ಸಹ ನಾನು 2018 ರಲ್ಲಿ ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿರುವುದು ತಪ್ಪು ಇರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ 8 ಗುಂಟೆ ಜಮೀನನ್ನು ಸರಕಾರದವರು ವಶಪಡಿಸಿಕೊಂಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕಃ 18.11.2016 ರ ಸಭೆಯಲ್ಲಿ ಚರ್ಚೆ ಆದ ಪ್ರಕಾರ 1 ನೇ ಪ್ರತಿವಾದಿಯ 8 ಗುಂಟೆ ಜಮೀನನ್ನು ಸರಕಾರದವರು ವಶಪಡಿಸಿಕೊಂಡ ಬಗ್ಗೆ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಯಿತು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯ ಅನುಕ್ರಮ ಸಂಖ್ಯೆ: 9 ರಲ್ಲಿ ಸರ್ವೆ ನಂಃ 70/4 ನೇದ್ದರಲ್ಲಿ 1 ನೇ ಪ್ರತಿವಾದಿಯ 8 ಗುಂಟೆ ಜಮೀನನ್ನು ಸರಕಾರದವರು ವಶಪಡಿಸಿಕೊಂಡ ಬಗ್ಗೆ ಬರೆದದ್ದು ಇರುತ್ತದೆ ಆದರೆ ನಾನು ಜಮೀನನ್ನು ಖರೀದಿ ಮಾಡುವಾಗ ಅದರ ಸರ್ವೆ ನಂಃ 70/2 ಅದರಲ್ಲಿ 1 ಎಕರೆ 8 ಗುಂಟೆ ಜಮೀನು ಇತ್ತು ಸದರಿ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ಪ್ರೊಸಿಡಿಂಗ್ಸ್ ಮತ್ತು ಅದಕ್ಕೆ ಅಡಕ ಇದ್ದ ದಾಖಲೆಯ ದಿನಾಂಕ ಬೇರೆ ಬೇರೆ ಇರುತ್ತದೆ ಎಂದು ಹೇಳುತ್ತಾರೆ. ಪ್ರೊಸಿಡಿಂಗ್ಸ್ ನ ಜೊತೆಗೆ ಇದ್ದ ಅಡಕ ದಾಖಲೆಯು ಪ್ರೊಸಿಡಿಂಗ್ಸ್ ನ ದಾಖಲೆ ಇರುವುದಿಲ್ಲ ಎಂದು ಹೇಳುತ್ತಾರೆ. 3 ಎಕರೆ 37 ಗುಂಟೆ ಜಮೀನನ್ನು ಸರಕಾರದವರು ವಶಪಡಿಸಿಕೊಂಡಿದರ ಬಗ್ಗೆ ಪ್ರೊಸಿಡಿಂಗ್ಸ್ ನ ಜೊತೆಗೆ ಇದ್ದ ಅಡಕ ದಾಖಲೆಯಲ್ಲಿ ಇರುವ ಬಗ್ಗೆ ಗೊತ್ತಿದ್ದರು ಸಹ ದಾವಾ ಜಮೀನು ಹೋಗುತ್ತದೆ ಎಂದು ತಿಳಿದು ಅದು ಇರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕಃ 13.02.2020 ರಂದು ಎ.ಡಿ.ಎಲ್ ಆರ್ ರವರಿಗೆ ಎಷ್ಟು ಜಮೀನನ್ನು ವಶಪಡಿಸಿಕೊಳ್ಳಬೇಕಾಗುತ್ತದೆ ಎನ್ನುವ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಹೇಳಿ ಜಿಲ್ಲಾಧಿಕಾರಿಯವರು ನೋಟೀಸ್ ನ್ನು ನೀಡಿದ್ದರು ಎಂದರೆ ಸಾಕ್ಷಿಯು ಇದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಸಂಪೂರ್ಣ ಜಮೀನನ್ನು 1 ಎಕರೆ 8 ಗುಂಟೆ ಜಮೀನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸಭೆಯಲ್ಲಿ ನೀವು ಭಾಗಿ ಆಗಿದ್ದರು ಸಹ ನೀವು ದಾವಾ ಜಮೀನನ್ನು ಖರೀದಿ ಮಾಡಿರುವುದು ತಪ್ಪು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಸಭೆಯಲ್ಲಿ ಚರ್ಚೆ ಆಗಿರಲಿಲ್ಲ ಹಾಗೂ ಸರಕಾರದವರು ಜಮೀನನ್ನು ವಶಪಡಿಸಿಕೊಂಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಸಭೆಯಲ್ಲಿ ಜಮೀನುಗಳ ಬೆಲೆಗಳನ್ನು ನಿಗದಿ ಮಾಡಿದರು ಎಂದು ಹೇಳುತ್ತಾರೆ. ನನ್ನ ಪ್ರಕರಣಕ್ಕೆ ಅನುಕೂಲವಾಗಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ರಸ್ತೆಯ ಸಲುವಾಗಿ 8 ಗುಂಟೆ ಜಮೀನನ್ನು ವಶಪಡಿಸಿಕೊಂಡಿದ್ದಕ್ಕೆ ನಿಮ್ಮಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ 8 ಗುಂಟೆ ಜಮೀನು ನಾನು ಖರೀದಿ ಮಾಡುತ್ತಿರುವ ಜಮೀನಿನಲ್ಲಿ ಬಂದರೆ ಅದು ನನಗೆ ಸಂಬಂದಪಡುತ್ತದೆ ಹಾಗೂ ಸದರಿ ಜಮೀನು ನನ್ನ ಜಮೀನಿನಲ್ಲಿ ಬರದಿದ್ದಾರೆ ಅದು ನನಗೆ ಸಂಬಂದಪಡುವುದಿಲ್ಲ ಎಂದು ಹೇಳುತ್ತಾರೆ. ನಾನು ದಾವಾ ಜಮೀನನ್ನು ಖರೀದಿ ಮಾಡುವುದಕ್ಕಿಂತ ಮುಂಚೆ ಸದರಿ ಜಮೀನನ್ನು ಸರಕಾರದವರು ವಶಪಡಿಸಿಕೊಳ್ಳುತ್ತಾರೋ ಅಥವಾ ಇಲ್ಲ ಎಂದು ನಾನು 1 ನೇ ಪ್ರತಿವಾದಿಯನ್ನು ಕೇಳಿದ್ದೆ ಆವಾಗ ಆತನು 1 ಎಕರೆ 8 ಗುಂಟೆ ಜಮೀನನ್ನು ಸರಕಾರದವರು ವಶಪಡಿಸಿಕೊಳುತ್ತಿಲ್ಲ ಎಂದು ನನಗೆ ಹೇಳಿದನು ಹಾಗೂ ಋಣಭಾರ ದಾಖಲೆಯಲ್ಲಿ 1 ಎಕರೆ 8 ಗುಂಟೆ ಜಮೀನು ಇತ್ತು ಎಂದು ಹೇಳುತ್ತಾರೆ.

ನಕ್ಷೆಯ ಪ್ರಕಾರ ಸರ್ವೆ ನಂಃ 70/4 ರಲ್ಲಿ 8 ಗುಂಟೆ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಇದರ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಕ್ಷೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ನಕ್ಷೆಯ ಬಗ್ಗೆ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ